## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1274(1316) |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಕಲಾ ಗ್ರಾಮ ಸ್ಥಾಪಿಸಲು ಯಾವ ಸ್ಥಳದಲ್ಲಿ ಸ್ಥಳ ಪರಿಶೀಲನೆ ಮಾಡಲಾಗಿದೆ; ಸ್ಥಳ ಪರಿಶೀಲನೆ ಮಾಡಿದ್ದರೆ ಇನ್ನೂ ಕಲಾ ಗ್ರಾಮ ನಿರ್ಮಾಣ ಕಾಮಗಾರಿ ಕೈಗೊಳ್ಳದಿರಲು ಕಾರಣವೇನು; (ಮಾಹಿತಿ ನೀಡುವುದು) | ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ಇವರು ದಿನಾಂಕ:24.07.2025ರ ಪತ್ರದಲ್ಲಿ, ಬೀದರ್ ಜಿಲ್ಲೆಯಲ್ಲಿ ಕಲಾಗ್ರಾಮ ಸ್ಥಾಪಿಸಲು ದಿನಾಂಕ:20.06.2025ರಂದು ನಡೆದ ಪೂರ್ವಭಾವಿ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದ್ದು, ಸದರಿ ಸಮಿತಿಯು ಕಲಾಗ್ರಾಮ ಸ್ಥಾಪನೆಗೆ ಸೂಕ್ತವಾದ ಸ್ಥಳವನ್ನು ಗುರುತಿಸಿ ಅಂದಾಜು ವೆಚ್ಚಪಟ್ಟಿ ಹಾಗೂ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ. (ವಿವರವನ್ನು ಅನುಬಂಧದಲ್ಲಿ ಇರಿಸಿದೆ) |
| ಆ) | ಸದರಿ ಕಲಾ ಗ್ರಾಮ ಕಾಮಗಾರಿ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ. |

ಸಂಖ್ಯೆ: ಕಸಂವಾ 84 ಕವಿಸ 2025

**(ಶಿವರಾಜ್ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು.

ಕರ್ನಾಟಕ ಸರ್ಕಾರ

# ಕಂದಾಯ ಇಲಾಖೆ

# ಜಿಲ್ಲಾಧಿಕಾರಿಗಳ, ಕಚೇರಿ, ಬೀದರ ಜಿಲ್ಲೆ, ಬೀದರ

[illegible] [illegible]

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
ಕನ್ನಡ ಭವನ ಜೆ.ಸಿ.ರಸ್ತೆ.
ಬೆಂಗಳೂರು-560002.

ಮಾನ್ಯರೆ

**ವಿಷಯ:** **ಜಿಲ್ಲಾ ಕಲಾಗ್ರಾಮ ಆದ್ಯತೆಯ ಮೇಲೆ ಸ್ಥಾಪಿಸಲು ನಡೆದ ಪೂರ್ವಭಾವಿ ಸಭೆಯ ನಡವಳಿಯನ್ನು ಸಲ್ಲಿಸುತ್ತಿರುವ ಕುರಿತು.**

ಉಲ್ಲೇಖ:
1) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಅವರ ಪತ್ರ ಸಂಖ್ಯೆ:ಡಿಕೆಸಿ:36011/59/2022 ದಿನಾಂಕ:29.08.2024.
2) ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಪೂರ್ವಭಾವಿ ಸಭೆಯ ನಡವಳಿ ದಿನಾಂಕ:20.06.2025

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ಸಾಂಸ್ಕೃತಿಕ ನೀತಿ ಶಿಫಾರಸ್ಸು ಮಾಡಿರುವಂತೆ ಜಿಲ್ಲಾ ಕಲಾಗ್ರಾಮವನ್ನು ಆದ್ಯತೆಯ ಮೇಲ ಸ್ಥಾಪಿಸಲು ದಿನಾಂಕ20.06.2025ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ 03 ಜನ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಕಲಾಗ್ರಾಮ ಸ್ಥಾಪನೆಗೆ ಸೂಕ್ತ ಸ್ಥಳವನ್ನು ಗುರುತಿಸಿ ಅಂದಾಜು ವೆಚ್ಚ ಪಟ್ಟಿ ಹಾಗೂ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಸದರಿ ಪೂರ್ವಭಾವಿ ಸಭೆಯ ನಡವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ಕ್ರ.ಸಂಖ್ಯೆ 592
ದಿನಾಂಕ 30/07/25
ಕನ್ನಡ ಭವನ

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿಗಳು,
ಬೀದರ ಜಿಲ್ಲೆ, ಬೀದರ.

**ದಿನಾಂಕ:20.06.2025ರಂದು ಬೆಳಗ್ಗೆ:11-00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕಲಾಗ್ರಾಮಗಳನ್ನು ಆದ್ಯತೆಯ ಮೇಲೆ ಸ್ಥಾಪಿಸಲು ನಡೆದ ಪೂರ್ವಭಾವಿ ಸಭೆಯ ನಡವಳಿಗಳು:**

**ಉಪಸ್ಥಿತರು: ಹಾಜರಾತಿ ಪುಸ್ತಕದಲ್ಲಿ ಇರುವಂತೆ :**

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಬೀದರ ಜಿಲ್ಲೆಯ ಸಾಹಿತಿಗಳು, ಚಿಂತಕರು, ಕಲಾವಿದರು, ಗಣ್ಯವ್ಯಕ್ತಿಗಳಿಗೆ ಸಭೆಗೆ ಆಗಮಿಸಿರುವುದಕ್ಕೆ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರು ಸ್ವಾಗತಿಸಿದರು. ಮುಂದುವರೆದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಜಿಲ್ಲಾಧಿಕಾರಿಗಳು ಬೀದರ ಅವರಿಗೆ ಜಿಲ್ಲಾ ಕಲಾಗ್ರಾಮಗಳನ್ನು ಆದ್ಯತೆಯ ಮೇಲೆ ಸ್ಥಾಪಿಸುವ ಕುರಿತು ಸಭೆಯನ್ನು ನಡೆಸಲು ಕೋರಿದರು.

1) **ಜಿಲ್ಲಾ ಕಲಾಗ್ರಾಮ ಸ್ಥಾಪಿಸಲು ಸರಕಾರಿ ಜಮೀನು 10 ಎಕರೆಯಿಂದ 15 ಎಕರೆ ಅವಶ್ಯಕತೆ ಇರುತ್ತದೆ ಸದರಿ ವಿಷಯದ ಕುರಿತು ಚರ್ಚೆ:**

- ಮಾನ್ಯ ಜಿಲ್ಲಾಧಿಕಾರಿಗಳು ಬೀದರ ಅವರು ಸಭೆಯಲ್ಲಿ ಮಾತನಾಡುತ್ತ ಜಿಲ್ಲಾ ಕಲಾಗ್ರಾಮ ಸ್ಥಾಪನೆಗಾಗಿ ಸುಮಾರು 10 ರಿಂದ 15 ಎಕರೆ ಜಮೀನು ಅವಶ್ಯಕವಾಗಿರುತ್ತದೆ. ಜಮೀನು ಜಿಲ್ಲಾ ಕೇಂದ್ರಕ್ಕೆ ಸಮೀಪವಾಗಿರುವ ಸ್ಥಳವಾಗಿರಬೇಕು. ಸೂಕ್ತವಾದ ಸ್ಥಳ ಗುರುತಿಸುವ ಕಾರ್ಯ ಆದಷ್ಟು ಬೇಗನೆ ಆಗಬೇಕು ಎಂದು ತಿಳಿಸಿದರು. ಸಭೆಯಲ್ಲಿರುವ ಸಾಹಿತಿಗಳು, ಚಿಂತಕರು, ಕಲಾವಿದರು ಬೀದರ ಸಮೀಪದಲ್ಲಿರುವ ಘೋಡಂಪಳ್ಳಿ, ಹಳ್ಳದಕೇರಿ (ಕೆ) , ಕಮಠಾಣಾ ಮತ್ತು ಬೀದರ ವಿಶ್ವವಿದ್ಯಾಲಯ ಹಾಲಹಳ್ಳಿ ಮುಂತಾದ ಸ್ಥಳಗಳನ್ನು ತಿಳಿಸಿದರು. ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಅವರು ಕಲಾ ಗ್ರಾಮಕ್ಕೆ ಸೂಕ್ತವಾದಂತಹ ಸ್ಥಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಜಂಟಿಯಾಗಿ ಭೇಟಿ ಮಾಡಿ ಸ್ಥಳ ಗುರುತಿಸುವ ಕಾರ್ಯ ಮಾಡಲು ಜಿಲ್ಲಾಧಿಕಾರಿಗಳು ಬೀದರ ಅವರು ಸಭೆಯಲ್ಲಿ ತಿಳಿಸಿದರು

2) **ಕಲಾ ಗ್ರಾಮ ಒಳಗೊಂಡಿರಬೇಕಾದ ಅಂಶಗಳ ಬಗ್ಗೆ ಚರ್ಚಿಸಲಾಯಿತು.**

ಮಾನ್ಯ ಜಿಲ್ಲಾಧಿಕಾರಿಗಳು ಬೀದರರವರು ಸಭೆಯಲ್ಲಿ ಬೀದರ ಜಿಲ್ಲೆಯಲ್ಲಿ ಜಿಲ್ಲೆಯ ನಾಡು-ನುಡಿ ಪ್ರತಿಬಿಂಬಿಸುವ ಸಂಸ್ಕೃತಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಲಾಗ್ರಾಮ ಸ್ಥಾಪನೆಯಾಗಬೇಕು. ಕಲಾಗ್ರಾಮದಲ್ಲಿ ಅಳವಡಿಸಬೇಕಾದ ವಿಶೇಷತೆಗಳ ಕುರಿತು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ಮಾಹಿತಿ ನೀಡಿದರು.

- ಬೀದರ ಜಿಲ್ಲೆಯ ಸಾಂಸ್ಕೃತಿಕ ಪ್ರವಾಸಿ ತಾಣಗಳ ಕುರಿತು ಮಾಹಿತಿಯ ಫಲಕಗಳು ಇರಬೇಕು
- ಬೀದರ ಜಿಲ್ಲೆಯ ಜಾನಪದ ಕರಕುಶಲ ಮತ್ತು ಮಾರಾಟ ಮಳಿಗೆಗಳು ಒಳಗೊಂಡಿರಬೇಕು.
- ಬಯಲು ರಂಗಮಂದಿರಗಳು ಮತ್ತು ಅಡೋಟೋರಿಯಂಗಳು ಇರಬೇಕು.
- ಆರ್ಟ್ ಗ್ಯಾಲರಿಗಳು
- ವಚನಕಾರರ ಮೂರ್ತಿಗಳು, ವಚನ ಸಿಂಚನ, ವಚನ ಸಾಹಿತ್ಯದ ಕುರಿತು ನಾಮಫಲಕಗಳು, ವಚನಗಳ ಸಾರಾಂಶವುಳ್ಳ ಕೋಶಗಳು ಇರಬೇಕು.
- ಶಿಲ್ಪವನ ಮತ್ತು ಮಕ್ಕಳಿಗೆ ಸಾಂಸ್ಕೃತಿಕವಾದಂತಹ ವನ ಇರಬೇಕು.

- ಡಿಜಿಟಲ್ ಹಾಗೂ ಪುಸ್ತಕ ಗ್ರಂಥಾಲಯಗಳು.
- ಬೀದರ ಜಿಲ್ಲೆಯ ಅತ್ಯಂತ ವಿಶಿಷ್ಟವಾದಂತಹ ಸಂಗೀತ ವಾದ್ಯಪರಿಕರಗಳು/ ಬಿದರಿ ಕಲೆ ಕಲಾಪ್ರದರ್ಶನಗಳ ಮೂರ್ತಿಗಳು, ಜಾನಪದ ಲೋಕದಲ್ಲಿ ಇರುವ ಎಲ್ಲಾ ಜಾನಪದ ಶೈಲಿಯ ವಸ್ತುಗಳು ಇರಬೇಕು. ಬೆಂಗಳೂರಿನ ಮಲತ್ತಹಳ್ಳಿಯಲ್ಲಿರುವಂತೆ ಕಲಾಗ್ರಾಮ ಸ್ಥಾಪನೆಯಾಗಬೇಕು
- ಈಜುಕೋಳ ಮತ್ತು ಸಂಗೀತ ಕಾರಂಜಿ ಇರಬೇಕು. ಪ್ರಾಚೀನ ಕಾಲದ ನಾಣ್ಯಗಳ ಸಂಗ್ರಾಲಯಗಳು, ಕೃಷಿ ಉಪಕರಣಗಳ ಶೇಖರಣೆಗಳು, ಮತ್ತು ನಾಟಿ ವೈದ್ಯದ ಪರಿಚಯದ ಸಸಿಗಳು ಮತ್ತು ಮಾಹಿತಿ ಸಂಗ್ರಾಲಯವಿರಬೇಕು.
- ವಿಶಿಷ್ಟವಾದಂತಹ ಉದ್ಯಾನವನ ಇರಬೇಕು.

### 3) ಜಿಲ್ಲೆಯ 03 ಜನ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುವುದು:

ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗಾಗಿ ಅರ್ಜಿ ಸಲ್ಲಿಸಿದ 14 ಜನರಲ್ಲಿ 03 ಜನರನ್ನು ಆಯ್ಕೆ ಮಾಡಲು ದಿನಾಂಕ:21.07.2025 ರಂದು ಮಾನ್ಯ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ 03 ಜನ ಸಂಪನ್ಮೂಲ ವ್ಯಕ್ತಿಗಳಾಗಿ ನೇಮಕ ಮಾಡಲಾಗಿದೆ.

| ಕ್ರ. ಸಂ | ಅಧಿಕಾರಿಗಳು/ಸಂಪನ್ಮೂಲ ವ್ಯಕ್ತಿಗಳ ಹೆಸರು | ಪದನಾಮ |
|---|---|---|
| 01. | ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ | ಅಧ್ಯಕ್ಷರು |
| 02. | ಶ್ರೀ ವಿಜಯಕುಮಾರ ಸೋನಾರೆ<br>ಸದಸ್ಯರು ಕರ್ನಾಟಕ ಜಾನಪದ ಅಕಾಡೆಮಿ<br>ಬೆಂಗಳೂರು. | ಸಂಪನ್ಮೂಲ ವ್ಯಕ್ತಿಗಳು |
| 03. | ಶ್ರೀಮತಿ ಭಾರತಿ ವಸ್ತ್ರದ<br>ಹಿರಿಯ ಸಾಹಿತಿಗಳು ಬೀದರ | ಸಂಪನ್ಮೂಲ ವ್ಯಕ್ತಿಗಳು |
| 04. | ಶ್ರೀ ಮಹೇಶ ವಿ.ಪಾಟೀಲ್<br>ಮಾಜಿ ರಂಗಾಯಣ ನಿರ್ದೇಶಕರು<br>ಹಿರಿಯ ರಂಗಭೂಮಿ ನಿರ್ದೇಶಕರು | ಸಂಪನ್ಮೂಲ ವ್ಯಕ್ತಿಗಳು |
| 05. | ಸಹಾಯಕ ನಿರ್ದೇಶಕರು<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ | ಸದಸ್ಯ ಕಾರ್ಯದರ್ಶಿಗಳು |

ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಮೇಲಿನ 03 ಜನ ಸಂಪನ್ಮೂಲ ವ್ಯಕ್ತಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಗಳನ್ನಾಗಿ ಮಾಡಿ ಸಮಿತಿಯನ್ನು ಸರ್ವಾನುಮತದಿಂದ ರಚನೆ ಮಾಡಲಾಯಿತು.

ಕಲಾಗ್ರಾಮಕ್ಕೆ ಸೂಕ್ತವಾದ ಸ್ಥಳವನ್ನು ಗುರುತಿಸಿ ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಅಂದಾಜು ವೆಚ್ಚ ಪಟ್ಟಿ ಮತ್ತು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕೊನೆಯಲ್ಲಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು
ಬೀದರ ಜಿಲ್ಲೆ, ಬೀದರ